

ಬಿಸಿಲು
ಬೆಳದಿಂಗಳು
ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಮತಾಂತರ ಮತ್ತು ರಾಜಕೀಯ....

**ಸ**ರ್ಕಾರವನ್ನು ಉರುಳಿಸುವ ಸಂಚು ವಿರೋಧಪಕ್ಷದವರಿಂದ ನಡೆದಿದೆಯೆಂದು ಮಾನ್ಯ ಮುಖ್ಯಮಂತ್ರಿ ಎಡೆಯೂರಪ್ಪನವರು ಇತ್ತೀಚೆಗೆ ಆರೋಪಿಸಿದ್ದಾರೆ. ಯಾರು ವಿರೋಧಪಕ್ಷ, ಯಾರು ಆಡಳಿತಪಕ್ಷ! ರಾಜಕೀಯದಲ್ಲಿ ಯಾರೂ ಖಾಯಂ ಶತ್ರುಗಳಲ್ಲ, ಯಾರೂ ಖಾಯಂ ಮಿತ್ರರಲ್ಲ ಎಂಬ ವಾಸ್ತವ ಸಂಗತಿಯನ್ನು ಕರ್ನಾಟಕದ ಸುದೀರ್ಘ ರಾಜಕಾರಣದ ಅನುಭವವುಳ್ಳ ಎಡೆಯೂರಪ್ಪನವರಿಗೆ ಹೇಳಿಕೊಡಬೇಕಾಗಿಲ್ಲ. ಬಸವಣ್ಣನವರು ಹೇಳುವಂತೆ **'ಸೂಳೆಗೆ ಹುಟ್ಟಿದ ಕೂಸಿನಂತೆ ಆರನಾದರೆಯೂ ಅಯ್ಯಾ, ಅಯ್ಯಾ ಎನಲಾರೆ'** ಎನ್ನುವ ಮೌಲ್ಯ ರಾಜಕೀಯರಂಗದಲ್ಲಿ ಎಲ್ಲಿದೆ? ಸೂಳೆಯ ಮಗುವಿಗೆ ತನ್ನ ನಿಜವಾದ ತಂದೆ ಯಾರೆಂದು ಗೊತ್ತಿರುವುದಿಲ್ಲ. ಅದು ಯಾರು ತನ್ನನ್ನು ಆರೈಕೆ ಮಾಡಿ ಪೋಷಿಸುತ್ತಾರೋ ಅವರನ್ನೇ ತಂದೆ ಎಂದು ಕರೆಯುತ್ತಾ ಹೋಗುತ್ತದೆ. ರಾಜಕೀಯ ಒಂದು ಚದುರಂಗದಾಟ. ಮೊನ್ನೆಯ ಚುನಾವಣೆಯಲ್ಲಿ ಶತ್ರುಗಳಾಗಿ ಸೆಣಸಾಡಿದವರು ಪಕ್ಷ ಬದಲಾಯಿಸಿ ಇಂದು ಸ್ನೇಹಿತರಾಗಬಹುದು. ನಿನ್ನೆ ಸ್ನೇಹಿತರಾಗಿದ್ದವರು ಇಂದು ಹಿತಶತ್ರುಗಳಾಗಿ ನಾಳೆ ನಿಜವಾದ ಶತ್ರುಗಳಾಗಬಹುದು.

ರಾಜಕಾರಣಿಗಳು ಅಧಿಕಾರಕ್ಕಾಗಿ ಮಾಡುವ ಷಡ್ಯಂತ್ರ ಕುರಿತು ಪ್ರಸಿದ್ಧ ಹಾಸ್ಯಸಾಹಿತಿ ಬೀchi ಬರೆದ ಒಂದು ಅಪರೂಪದ ಕಥೆ ನೆನಪಾಗುತ್ತದೆ. ಇದನ್ನು ನಮ್ಮ ಮಠದ ನಿಕಟವರ್ತಿ, ಮೊನ್ನೆ ತಾನೇ ಅಮೇರಿಕಾದ ಅಕ್ಕ ಸಮ್ಮೇಳನಕ್ಕೆ ಹೋಗಿಬಂದ ಉತ್ತಮ ವಾಗ್ಮಿ ಚಟ್ನಳ್ಳಿ ಮಹೇಶ್ ಸಾರ್ವಜನಿಕ ವೇದಿಕೆಗಳಲ್ಲಿ ತುಂಬಾ ಸ್ವಾರಸ್ಯಕರವಾಗಿ ನಿರೂಪಿಸುತ್ತಾನೆ. ಎಷ್ಟೋ ವರ್ಷಗಳ ಹಿಂದೆ ಬೀchi ಮಾಡಿದ ಈ ರಾಜಕೀಯ ವಿಡಂಬನೆ ಈಗಲೂ ಪ್ರಸ್ತುತವಾಗಿದೆ. ಆ ಕಥೆಯ ಪರಿಷ್ಕೃತ ರೂಪ ಹೀಗಿದೆ: ಒಂದೂರಲ್ಲೊಬ್ಬ ಚಿಲ್ಲರೆ ರಾಜಕೀಯ ಮಾಡುವ ಶ್ರೀಮಂತ ಪುಢಾರಿ ಇದ್ದ. ಬಹಳ ವರ್ಷಗಳ ಕಾಲ ಅವನಿಗೆ ಮಕ್ಕಳಾಗಲಿಲ್ಲ. ದಂಪತಿಗಳು ದೇವರಿಗೆ ಬೆಳ್ಳಿಯ ಜೋಡಿದೀಪ ಕೊಡುವುದಾಗಿ ಹರಕೆ ಹಾಕಿಕೊಂಡರು. ದೇವರ ಕೃಪೆಯಿಂದ ಹೆಂಡತಿ ಗರ್ಭವತಿಯಾದಳು. ಒಂದಲ್ಲ ಎರಡು ಗಂಡು ಮಕ್ಕಳ ತಾಯಿಯಾಗಲಿದ್ದಾಳೆಂಬ ಸಂತೋಷದ ಸಂಗತಿ ವೈದ್ಯರಿಂದ ತಿಳಿದು ಊರಲ್ಲೆಲ್ಲಾ ಸುದ್ದಿಯಾಯಿತು. ಪುಢಾರಿಯು ಮಕ್ಕಳ ಭವಿಷ್ಯವನ್ನು ಕೇಳಲು ಜೋತಿಷಿಯನ್ನು ಕರೆಸಿದ. ಅವಳಿ ಜವಳಿ ಮಕ್ಕಳಾಗುವುದನ್ನು ಖಚಿತಪಡಿಸಿದ ಜೋತಿಷಿ ಅವರಲ್ಲಿ ಹಿರಿಯ ಮಗನು ಈ ನಾಡಿನ ಮುಖ್ಯಮಂತ್ರಿಯಾಗುತ್ತಾನೆ ಎಂದು ಹೇಳಿದಾಗ ಪುಢಾರಿಗೆ ಸ್ವರ್ಗಕ್ಕೆ ಮೂರೇ ಗೇಣು. ಎರಡನೆಯ ಮಗ ಏನಾಗುತ್ತಾನೆ, ಯಾವ ಖಾತೆ ಪಡೆಯುತ್ತಾನೆ ತಿಳಿದುಕೊಳ್ಳಬೇಕೆಂಬ ಕುತೂಹಲ. ಜೋತಿಷಿ ಪೆಚ್ಚು ಮೋರೆ ಮಾಡಿಕೊಂಡು ಮೆಲುದನಿಯಲ್ಲಿ 'ಎರಡನೆಯ ಮಗ ವಿಧಾನಸೌಧದಲ್ಲಿ ಬಾಗಿಲು ಕಾಯುವ ಜವಾನ ಆಗುತ್ತಾನೆ' ಎಂದು ಹೇಳಿದಾಗ ಪುಢಾರಿಗೆ ದುಃಖವಾಯಿತು. 'ಜವಾನನಾದರೂ ಅವನೂ ಚೆನ್ನಾಗಿ ದುಡ್ಡು ಮಾಡುತ್ತಾನೆ' ಎಂದು ಹೇಳಿದರೂ ಸಮಾಧಾನ ಆಗಲಿಲ್ಲ. ಹಿರಿಯಮಗನಿಗೆ ಮುಂದೆ ಹೇಳಿ ಯಾವುದಾದರೂ ಒಳ್ಳೆಯ ಖಾತೆ ಕೊಡಿಸಿದರಾಯಿತು ಎಂದುಕೊಂಡು ತಂದೆಯಾಗುವ ಸುಯೋಗಕ್ಕಾಗಿ ಕಾಯುತ್ತಿದ್ದ. ಹೆಂಡತಿಗೆ ಒಂಭತ್ತು ತಿಂಗಳಾಯಿತು. ಹೆರಿಗೆ ನೋವೇ ಕಾಣಿಸಿಕೊಳ್ಳಲಿಲ್ಲ. ಹತ್ತು, ಹನ್ನೊಂದು, ಹನ್ನೆರಡು ತಿಂಗಳಾದರೂ ಹೆಂಡತಿ ಮಕ್ಕಳನ್ನು ಹೆರುವ ಸೂಚನೆ ಕಾಣಿಸಲಿಲ್ಲ. ಆಗಿದ್ದೇನು? ಚಕ್ರವ್ಯೂಹ ಭೇದಿಸುವ ರಹಸ್ಯವನ್ನು ಶ್ರೀಕೃಷ್ಣನು ಸುಭದ್ರೆಗೆ ಹೇಳುತ್ತಿದ್ದಾಗ ಗರ್ಭದಲ್ಲಿದ್ದ ಅಭಿಮನ್ಯು ಕೇಳಿಸಿಕೊಂಡಂತೆ ಆ ಪುಢಾರಿಯ ಹೆಂಡತಿಯ ಹೊಟ್ಟೆಯೊಳಗಿದ್ದ ಅವಳಿ ಜವಳಿ ಮಕ್ಕಳು ಜೋತಿಷಿಯ ಮಾತುಗಳನ್ನು ಕೇಳಿಸಿಕೊಂಡಿದ್ದವು. ಆಗಲೇ ಹಿರಿಯ ಮಗನು ಮುಖ್ಯಮಂತ್ರಿಯಾಗುವನೆಂಬ ದರ್ಪ-ಧಿಮಾಕಿನಲ್ಲಿದ್ದರೆ, ಕಿರಿಯ ಮಗನಿಗೆ ತಾನು ಜವಾನನಾಗಬೇಕಾಗುತ್ತದಲ್ಲಾ ಎಂಬ 'ಹೊಟ್ಟೆಯುರಿ' ಸಹಿಸಿಕೊಳ್ಳಲಾಗಲಿಲ್ಲ. ಅಣ್ಣನಿಗೆ ಹುಟ್ಟಲು ಅವಕಾಶ ಮಾಡಿಕೊಟ್ಟರೆ ತಾನೇ ಅವನು ಮುಂದೆ ಮುಖ್ಯಮಂತ್ರಿಯಾಗುವುದು ಎಂದು ತಮ್ಮನು ಆಲೋಚಿಸಿ ಸಂಚು ಮಾಡಿ ಅಣ್ಣ ಹುಟ್ಟದಂತೆ ತಾಯಿಯ ಗರ್ಭಕೋಶದ ಬಾಗಿಲಿಗೆ ಅಡ್ಡ ಬಂದು ಮಲಗಿದ್ದನಂತೆ!

ಹೀಗೆ ವಿರೋಧಪಕ್ಷದವರು ಆಡಳಿತ ಪಕ್ಷವನ್ನು ಉರುಳಿಸಬೇಕೆಂಬ ಸನ್ನಾಹದಲ್ಲಿಯೇ ಸದಾ ಮಗ್ನರಾಗಿರುತ್ತಾರೆ. ನಮ್ಮ ರಾಜಕಾರಣಿಗಳು ನಡೆಸುವ ಚಹಾಕೂಟಗಳು, Dinner Politics ಗಳು ನಾಡಿನ ಜನತೆಯೊಂದಿಗೆ ಆಡುವ ಚೆಲ್ಲಾಟಗಳು. ಅಧಿಕಾರದಿಂದ ಕೆಳಗಿಳಿಸಲು ಒಂದು ರೀತಿಯ ಕಸರತ್ತು ವಿರೋಧಪಕ್ಷದವರಿಂದ ನಡೆದರೆ, ಅಧಿಕಾರವನ್ನು ಉಳಿಸಿಕೊಳ್ಳಲು ಮತ್ತೊಂದು ರೀತಿಯ ಕಸರತ್ತು ಆಡಳಿತಪಕ್ಷದವರಿಂದ ನಡೆಯುತ್ತದೆ. ಅಧಿಕಾರವನ್ನು ಕಿತ್ತುಕೊಳ್ಳಲು ಮತ್ತು ಉಳಿಸಿಕೊಳ್ಳಲು ನಡೆಯುವ ಈ ಕೊಳಕು ರಾಜಕೀಯದ ಹಗ್ಗಜಗ್ಗಾಟ ಅಥವಾ 'ಹಾವು ಏಣಿ' ಆಟ ಬೇರಾವ ದೇಶಗಳಲ್ಲಿಯೂ ಇಲ್ಲ. ಅದಕ್ಕಾಗಿ ಜನರನ್ನು ಎತ್ತಿಕಟ್ಟುವುದು ಇಲ್ಲಿ ಮತ್ತೊಂದು ದೊಡ್ಡ ದುರಂತ. ಬಹುಸಂಖ್ಯಾತರ ಧಾರ್ಮಿಕ ಭಾವನೆಗಳನ್ನು ಕೆರಳಿಸಿ ಅಧಿಕಾರ ಹಿಡಿಯುವ ಹವಣಿಕೆ ಈ ಪಕ್ಷದಿಂದ ನಡೆದಿದೆಯೆಂದು ಆ ಪಕ್ಷದವರು ಆಪಾದಿಸಿದರೆ, ಅಲ್ಪಸಂಖ್ಯಾತರನ್ನು ಓಲೈಸಿ ಅಧಿಕಾರ ಪಡೆಯುವ ಹವಣಿಕೆ ಆ ಪಕ್ಷದವರಿಂದ ನಡೆದಿದೆಯೆಂದು ಈ ಪಕ್ಷದವರು ಆರೋಪಿಸುತ್ತಾರೆ. ಆದರೆ ಇಬ್ಬರೂ ಗಾಂಧೀವಾದಿಗಳಲ್ಲ. ಗಾಂಧಿಯ ಪ್ರತಿಮೆಯ ಕೆಳಗೆ ಕುಳಿತು ಎಲ್ಲರೂ ಸಂದರ್ಭಾನುಸಾರ ಯಥೋಚಿತ ಗಾಂಧಿಗೇ ಟೋಪಿ ಹಾಕುವ ಮೋಸಗಾರರು. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಇಂತಹ ಕೆಟ್ಟ ರಾಜಕೀಯ ಪ್ರವೃತ್ತಿ ಬೆಳೆಯುತ್ತದೆಯೆಂಬ ಪರಿಕಲ್ಪನೆ ಬಹುಶಃ ನಮ್ಮ ದೇಶದ ಸಂವಿಧಾನದ ಶಿಲ್ಪಿಗಳಿಗೆ ಇರಲಿಲ್ಲ. ಜಗತ್ತಿನ ಎಲ್ಲ ಸಂವಿಧಾನಗಳನ್ನು ಅಧ್ಯಯನ ಮಾಡಿ ರಚಿಸಿದ ನಮ್ಮ ಸಂವಿಧಾನ ಪರಿಪೂರ್ಣ ಎನಿಸಿಕೊಳ್ಳಬೇಕಾಗಿತ್ತು; ದೇಶದ ಎಲ್ಲ ಆಡಳಿತಾತ್ಮಕ ಬಿಕ್ಕಟ್ಟುಗಳಿಗೆ ಪರಿಹಾರ ಸಿಗಬೇಕಾಗಿತ್ತು. ಆದರೆ ಸಿಕ್ಕುತ್ತಿಲ್ಲ. ಇದಕ್ಕೆ ಕಾರಣ ಬೇರಾವ ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿಯೂ ಇದುವರೆಗೆ ನಡೆಯದ ರಾಜಕೀಯ ದೊಂಬರಾಟ ಸ್ವತಂತ್ರಭಾರತದಲ್ಲಿ ನಡೆಯುತ್ತಾ ಬಂದಿರುವುದು. ಇಂತಹ ಸಮಸ್ಯೆಗಳಿಗೆ ಈಗಿರುವ ನಿಯಮಗಳಲ್ಲಿ ಪರಿಹಾರ ಸಿಗದೆ ರಾಜಕಾರಣಿಗಳು ಲಂಗುಲಗಾಮಿಲ್ಲದ ಕುದುರೆಗಳಂತಾಗಿದ್ದಾರೆ. ಆದಕಾರಣವೇ ಏನೋ ರಾಜಕೀಯದ ವಲಯಗಳಲ್ಲಿ 'ಕುದುರೆವ್ಯಾಪಾರ'ದ ಮಾತು ಆಗಾಗ್ಗೆ ಪತ್ರಿಕೆಗಳಲ್ಲಿ ಕೇಳಿಬರುತ್ತದೆ. ತನ್ನನ್ನು ಬಿಟ್ಟು ಸರ್ಕಾರ ರಚನೆ ಮಾಡುವ ತಾಕತ್ತು ಯಾರಿಗಿದೆ ಎಂದು ಸವಾಲು ಹಾಕುವ ಮಟ್ಟಕ್ಕೆ ಹೋಗಿರುವ ರಾಜಕೀಯ ಮುಖಂಡರ ಸಿಂಹಘರ್ಜನೆ, ಅಧಿಕಾರದ ಆಸೆಗಾಗಿಯೇ ಹುಟ್ಟಿಕೊಳ್ಳುತ್ತಿರುವ ಹೊಸ ಹೊಸ ರಾಜಕೀಯ ಪಕ್ಷಗಳು ಪ್ರಜಾಪ್ರಭುತ್ವವನ್ನು ನಲುಗಿಸಿವೆ. ಇಂತಹ ಪಟ್ಟಭದ್ರಹಿತಾಸಕ್ತಿಗಳ ಅಟ್ಟಹಾಸ ನಡೆಯದಂತೆ ಇದಕ್ಕೆಲ್ಲಾ ಕಡಿವಾಣ ಹಾಕಿ ಒಂದು ಸುಭದ್ರ ಸರ್ಕಾರ ರಚಿಸಲು ಬೇಕಾದ ಸೂಕ್ತ ನಿಯಮಾವಳಿಗಳನ್ನು ರೂಪಿಸುವ ಅವಶ್ಯಕತೆ ಇಂದು ಬಹಳವಾಗಿದೆ. ಯಾವುದೇ ಪಕ್ಷ ಅಧಿಕಾರಕ್ಕೆ ಬರಲಿ ಸ್ವಜನಪಕ್ಷಪಾತ, ದರ್ಪ ದೌರ್ಜನ್ಯಗಳನ್ನು ನಡೆಸದೆ, ತನ್ನ ಅಧಿಕಾರವನ್ನು ಉಳಿಸಿಕೊಳ್ಳುವ ಕಡೆಗೆ ಗಮನ ಹರಿಸಬೇಕಾದ ಅನಿವಾರ್ಯತೆಯುಂಟಾಗದೆ, ಜನತೆಯ ಕಷ್ಟಕೋಟಲೆಗಳಿಗೆ ತಕ್ಷಣವೇ ಸ್ಪಂದಿಸಿ ಕಾರ್ಯಪ್ರವೃತ್ತವಾಗುವುದರ ಕಡೆಗೆ ಪೂರ್ಣ ಗಮನಹರಿಸುವಂತಹ ನಿರಾತಂಕ ವಾತಾವರಣ ರೂಪುಗೊಳ್ಳಬೇಕಾಗಿದೆ.

ಇತ್ತೀಚೆಗೆ ಕರ್ನಾಟಕ ಮತ್ತು ಒರಿಸ್ಸಾ ರಾಜ್ಯಗಳಲ್ಲಿ ನಡೆದಿರುವ ಕೋಮುಗಲಭೆಗಳು ದೇಶದ ಆಂತರಿಕ ಸಮಸ್ಯೆಗಳಾಗಿ ಉಳಿದಿಲ್ಲ, ಅಂತಾರಾಷ್ಟ್ರೀಯ ಸಮಸ್ಯೆಗಳಾಗಿ ರೂಪುಗೊಂಡಿವೆ. ಅಣು ಒಪ್ಪಂದಕ್ಕೂ ಈ ಸಮಸ್ಯೆಗಳಿಗೂ ಯಾವುದೇ ಸಂಬಂಧವಿಲ್ಲದಿದ್ದರೂ ಅಮೇರಿಕಾ ಮತ್ತು ಫ್ರಾನ್ಸ್ ದೇಶಗಳು ಈ ವಿಚಾರವಾಗಿ ಮೂಗು ತೂರಿಸಿ ಷರತ್ತುಗಳನ್ನು ವಿಧಿಸುವ ಮಟ್ಟಕ್ಕೆ ಹೋಗಿವೆ. ಜಗತ್ತಿನ ಜನರ ಕಣ್ಣಿಗೆ ಕಾಣುವ ವಿಭಿನ್ನ ದೇಶಗಳ ರಾಜಕೀಯ ಸೀಮಾರೇಖೆಯ ಭೂಪಟವೇ ಒಂದಾದರೆ, ಯಾರ ಕಣ್ಣಿಗೂ ಕಾಣಿಸದ ಆದರೆ ಎಲ್ಲರಿಗೂ ಗೊತ್ತಿರುವ ವಿಭಿನ್ನ ಧರ್ಮಗಳ ಮತೀಯ ಭೂಪಟವೇ ಬೇರೆ. ಆಯಾಯ ಭೂಭಾಗದ ಖನಿಜಸಂಪತ್ತು, ಹರಿವ ನದಿಗಳು, ಗುಡ್ಡಬೆಟ್ಟ ಪರ್ವತಶ್ರೇಣಿಗಳ ಮಾಹಿತಿಯನ್ನೊಳಗೊಂಡ ಭೂಪಟವನ್ನು ಸಿದ್ಧಪಡಿಸಿದಂತೆ ಆಯಾಯ ಭೂಭಾಗದ ನಿವಾಸಿಗಳ ಮತಧರ್ಮಗಳನ್ನು ಆಧರಿಸಿ ಸಿದ್ಧಪಡಿಸಿದ ಭೂಪಟ ಇಲ್ಲ. ಅದು ಇಂತಹ ಕಹಿ ಪ್ರಸಂಗಗಳು ಉಂಟಾದಾಗ ತಂತಾನೇ ಕಣ್ಮುಂದೆ ಬಂದು ನಿಲ್ಲುತ್ತದೆ. ಮಂದಿರ-ಮಸೀದಿ-ಚರ್ಚುಗಳು ತಮ್ಮ ತಮ್ಮ ಅನುಯಾಯಿಗಳನ್ನು ಆತ್ಮೋನ್ನತಿಯ ಮಾರ್ಗದಲ್ಲಿ ಕರೆದುಕೊಂಡು ಹೋಗುವ ಆಧ್ಯಾತ್ಮಿಕ ಕೇಂದ್ರಗಳಾಗದೆ ಮತೀಯ ದುರ್ಭಾವನೆಗಳನ್ನು ಬಿತ್ತುವ 'ಧಾರ್ಮಿಕ ಅಣುಶಕ್ತಿ ಸ್ಥಾವರ'ಗಳಾಗಿವೆ (Religious Automic Plants). ಅಣುಶಕ್ತಿಸ್ಥಾವರಗಳು ಮಾನವತೆಗೆ ಅವಶ್ಯಕವಾಗಿ ಬೇಕಾದ ಉಪಯುಕ್ತ ಕಾರ್ಯಗಳಿಗೆಂದು ಸ್ಥಾಪಿತಗೊಂಡಿದ್ದರೂ ಕೆಲವೊಮ್ಮೆ ನಿಯಂತ್ರಣ ತಪ್ಪಿ ಆಸ್ಫೋಟಗೊಂಡು 'ಚೆರ್ನೋಬಿಲ್'ನಲ್ಲಿ ದುರಂತಕ್ಕೆ ಕಾರಣವಾದಂತೆ ಧರ್ಮಗಳೂ ದುರಂತಗಳಿಗೆ ಕಾರಣವಾಗುತ್ತಿವೆ. ವಿಜ್ಞಾನಿಗಳ ಅಣುಬಾಂಬು ಆಸ್ಫೋಟಗೊಂಡ ಸ್ಥಳದ ಸುತ್ತಮುತ್ತ ನಿರ್ದಿಷ್ಟ ಭೂವಲಯವನ್ನು ಮಾತ್ರ ಧ್ವಂಸಗೊಳಿಸಿದರೆ, ಈ ಧಾರ್ಮಿಕ ದುರ್ಭಾವನೆಗಳ ಅಣುಬಾಂಬುಗಳು ಆಸ್ಫೋಟಗೊಂಡ ಸ್ಥಳಕ್ಕೆ ಸೀಮಿತಗೊಳ್ಳದೆ ಕ್ಷಣಾರ್ಧದಲ್ಲಿ ಇಡೀ ಭೂಮಂಡಲವನ್ನೇ ವ್ಯಾಪಿಸುತ್ತವೆ. ಪವಿತ್ರ ಪೂಜಾಸ್ಥಾನಗಳಾದ ಈ ಮಂದಿರ-ಮಸೀದಿ-ಚರ್ಚುಗಳಲ್ಲಿ ಬಂದೂಕು ಹಿಡಿದು ಭಯ ಹುಟ್ಟಿಸುವ ಸಶಸ್ತ್ರ ಪೋಲೀಸರ ಸರ್ಪಗಾವಲು!

ಭಕ್ತರನ್ನು ರಕ್ಷಿಸಬೇಕಾದ ಸರ್ವಶಕ್ತನೆನಿಸಿದ ದೇವರನ್ನೇ ರಕ್ಷಿಸಬೇಕಾದ ವಿಪರೀತ ಪರಿಸ್ಥಿತಿ! ತನ್ನನ್ನೇ ರಕ್ಷಿಸಿಕೊಳ್ಳಲಾಗದ ದೇವರು ಇನ್ನೆಂತು ಭಕ್ತರನ್ನು ರಕ್ಷಿಸಬಲ್ಲ ಎಂದು ಯಾರಾದರೂ ಕೇಳಿದರೆ ಏನೆಂದು ಉತ್ತರಿಸುತ್ತೀರಿ?

ಇಂದು ಚರ್ಚುಗಳ ಮೇಲೆ ನಡೆದಿರುವ ಧಾಳಿಯ ನಿಷ್ಪಕ್ಷಪಾತ ತನಿಖೆಯನ್ನು ಕರ್ನಾಟಕದವರಲ್ಲದ ಸುಪ್ರೀಂ ಕೋರ್ಟ್ ನ್ಯಾಯಾಧೀಶರಿಂದ ಮಾಡಿಸಬೇಕೆಂಬ ಒತ್ತಾಸೆ ಒತ್ತಾಸೆಯನ್ನು ಬೆಂಗಳೂರಿನ ಆರ್ಚ್ ಬಿಷಪ್ ಡಾ॥ ಬರ್ನಾಡ್ ಮೋರಸ್‌ರವರು ವ್ಯಕ್ತಪಡಿಸಿದ್ದಾರೆ. ಅವರು ಹಿಂದೂಗಳಲ್ಲದ ನ್ಯಾಯಾಧೀಶರಿಂದ ಮಾಡಿಸಬೇಕೆಂದು ಹೇಳಲು ಏಕೋ ಮರೆತಂತೆ ಕಾಣಿಸುತ್ತದೆ! 'ಎಡ ಕೆನ್ನೆಗೆ ಹೊಡೆದರೆ ನಿನ್ನ ಬಲಗೆನ್ನೆಯನ್ನು ಒಡ್ಡು' ಎಂಬ ಏಸುಕ್ರಿಸ್ತನ ಧರ್ಮೋಪದೇಶವನ್ನೂ ಮರೆತಂತೆ ತೋರುತ್ತದೆ. ಇಂತಹ ದುಷ್ಕೃತ್ಯಗಳು ನಡೆಯಲು ಕಾರಣವೇನೆಂಬುದನ್ನು ತಿಳಿಯಲು ಯಾವ ನ್ಯಾಯಾಧೀಶರ ವರದಿಗೂ ಕಾಯಬೇಕಾಗಿಲ್ಲ. ಮುಂಗೈಯ ಹುಣ್ಣನ್ನು ನೋಡಿಕೊಳ್ಳಲು ಕನ್ನಡಿ ಏಕೆ ಬೇಕು? ಇದಕ್ಕೆಲ್ಲ ಮೂಲ ಕಾರಣ ಶತಮಾನಗಳಿಂದ ಅವ್ಯಾಹತವಾಗಿ ನಡೆದುಕೊಂಡು ಬಂದಿರುವ ಮತಾಂತರ ಎಂಬುದು ಎಲ್ಲರಿಗೂ ಗೊತ್ತಿರುವ ಸಾಮಾನ್ಯ ಸಂಗತಿ. ಹಿಂದೆ ರಾಜಮಹಾರಾಜರು ತಮ್ಮ ಸಾಮ್ರಾಜ್ಯವನ್ನು ವಿಸ್ತರಿಸಲು ಪಕ್ಕದ ರಾಜರುಗಳ ಮೇಲೆ ದಂಡೆತ್ತಿ ಹೋಗುತ್ತಿದ್ದರು. ಅದರಂತೆ ಮತಾಂತರವು ಸಹ ತಮ್ಮ ಧಾರ್ಮಿಕ ಸಾಮ್ರಾಜ್ಯವನ್ನು ವಿಸ್ತರಿಸುವ ಆಕ್ರಮಣಕಾರಿ ಮನೋಧರ್ಮವಾಗಿದೆ. ಹೀಗಾಗಿ ಧರ್ಮ ಮತ್ತು ದೇವರ ಹೆಸರಿನಲ್ಲಿ ಸ್ಥಾಪಿಸಿಕೊಂಡಿರುವ ಧಾರ್ಮಿಕಸಂಘಟನೆಗಳು ತಂತಮ್ಮ ಧಾರ್ಮಿಕ ಸರಹದ್ದನ್ನು ಸಂರಕ್ಷಿಸಿಕೊಳ್ಳಲು ನೇಮಿಸಿಕೊಂಡಿರುವ ಸೇನಾತುಕಡಿಗಳಾಗಿವೆ.

ನಮ್ಮ ದೇಶದ ಸಂವಿಧಾನವು ಎಲ್ಲ ಧರ್ಮಗಳನ್ನು ಸಮಾನವಾಗಿ ನೋಡುವ ವಿಶಾಲದೃಷ್ಟಿಯನ್ನು ಹೊಂದಿದ್ದು ಪ್ರತಿಯೊಬ್ಬರೂ ತಾವು ನಂಬಿದ ಧರ್ಮವನ್ನು ಆಚರಿಸಿಕೊಂಡು ಹೋಗಲು ಮುಕ್ತ ಅವಕಾಶವಿದೆ. ಅದರ ದುರ್ಲಾಭವನ್ನು ಪಡೆದು ತಮ್ಮ ಧರ್ಮದ ಸಾಮ್ರಾಜ್ಯಶಾಯಿಯನ್ನು ಸ್ಥಾಪಿಸಲು ಹೊರಡುವುದು ಸರಿಯಲ್ಲ. ಹಿಂದೂ ಧರ್ಮೀಯರ 'ಪರಧರ್ಮ ಸಹಿಷ್ಣುತೆ'ಯು ತನ್ನ ಸಹನೆಯನ್ನು ಕಳೆದುಕೊಂಡಿರುವುದರಿಂದ ಅದೂ ಉಪಯೋಗಕ್ಕೆ ಬರುವ ತತ್ವವಾಗಿ ಉಳಿದಿಲ್ಲ. ಪಕ್ಕದ ಮನೆಯವನನ್ನು ಮಾತನಾಡಿಸದೆ ಅವನ ಉಸಾಬರಿ ಬೇಡವೆಂದು ಸುಮ್ಮನಿರುವುದು ಬೇರೆ. ಅವನೊಂದಿಗೆ ಸ್ನೇಹವಿಶ್ವಾಸ ಬೆಳೆಸಿ ಗೌರವದಿಂದ ವರ್ತಿಸುವುದು ಬೇರೆ. ಅವನನ್ನು ಕೆಟ್ಟವನೆಂದು ತಿಳಿದು ಎಷ್ಟೇ ಸಹಿಸಿಕೊಂಡಿದ್ದರೂ ಅವನು ಒಂದು ದಿನ ತನ್ನ ಮನೆಯ ಕಸವೆಲ್ಲವನ್ನೂ ನಿಮ್ಮ ಮನೆಯ ಅಂಗಳದಲ್ಲಿ ತಂದು ಹಾಕಿದಾಗ ನಿಮ್ಮ ಸಹನೆಯ ಕಟ್ಟೆ ಒಡೆಯುತ್ತದೆ. ಈಗ ಕರ್ನಾಟಕ ಮತ್ತು ಒರಿಸ್ಸಾದಲ್ಲಿ ಆಗುತ್ತಿರುವುದು ಇದೇ. ಇದಕ್ಕೆ ಪರಿಹಾರ ಸುಪ್ರೀಂಕೋರ್ಟಿನ ನ್ಯಾಯಾಧೀಶರಿಂದ ತನಿಖೆ ಮಾಡಿಸುವುದಲ್ಲ. ಪರಸ್ಪರ ಸೌಹಾರ್ದತೆಯಿಂದ ಬದುಕಬೇಕೆಂಬ ಅರಿವು ಮೂಡಿಸುವುದು. 'ಏಕಂ ಸತ್ ವಿಪ್ರಾ ಬಹುಧಾ ವದಂತಿ', 'ದೇವನೊಬ್ಬ ನಾಮ ಹಲವು' ಎಂದು ತಿಳಿಹೇಳುವುದು. ಪರಂಪರಾಗತವಾಗಿ ಹೇಳಿಕೊಂಡು ಬಂದಿರುವ 'ಪರಧರ್ಮಸಹಿಷ್ಣುತೆ'ಗಿಂತ ಇಂದು ತುರ್ತಾಗಿ ಬೇಕಾಗಿರುವುದು 'ಪರಧರ್ಮ ಗೌರವಭಾವನೆ' (Respect for other Religions). ಈ ಗೌರವಭಾವನೆಯು ಹಿಂದೂಗಳಷ್ಟೇ ಪಾಲಿಸಬೇಕಾದ ತತ್ವವಾದರೆ ಸಾಲದು. ಎಲ್ಲ ಧರ್ಮೀಯರೂ ಸಹಜವಾಗಿ ಪಾಲಿಸುವಂತಾದರೆ ಆಗ ಮತಾಂತರದ ಮತಾಂತರದ ಪ್ರಶ್ನೆ ಉದ್ಭವಿಸುವುದೇ ಇಲ್ಲ, ಮತೀಯ ಘರ್ಷಣೆಗಳಿಗೆ ದಾರಿಯಾಗುವುದಿಲ್ಲ. ಮತ್ತೊಂದು ಧರ್ಮದ ಬಗ್ಗೆ ಅವಹೇಳನ, ತನ್ನ ಧರ್ಮವೇ ಶ್ರೇಷ್ಠ ಎಂಬ ವೈಭವೀಕರಣ ಇವೆರಡೂ ಇಲ್ಲವಾದರೆ ಮಾತ್ರ ಮತೀಯ ಸಾಮರಸ್ಯ ಉಳಿಯುತ್ತದೆ. ಸಿರಿಗೆರೆಯ ನಮ್ಮ ವಿದ್ಯಾರ್ಥಿನಿಲಯದಲ್ಲಿ ಸ್ವಾತಂತ್ರ್ಯಪೂರ್ವದಲ್ಲಿಯೇ ನಮ್ಮ ಲಿಂಗೈಕ್ಯ ಗುರುವರ್ಯರು ಜಾತಿ-ಮತಭೇದವಿಲ್ಲದೆ ವಿದ್ಯಾರ್ಥಿಗಳು ಸಹಪಂಕ್ತಿಭೋಜನ ಮಾಡುವುದನ್ನು ಜಾರಿಗೆ ತಂದರು. ಒಮ್ಮೆ ಮುಸ್ಲಿಂ ಹುಡುಗನೊಬ್ಬ ನಮ್ಮ ಹತ್ತಿರ ದೂರು ಸಲ್ಲಿಸಿದ. 'ಎಲ್ಲರೂ ಕಡ್ಡಾಯವಾಗಿ ವಿಭೂತಿ ಧರಿಸಬೇಕೆಂದು ನಿಲಯಪಾಲಕರು ಒತ್ತಾಯಪಡಿಸುತ್ತಿದ್ದಾರೆ. ನಮ್ಮ ಧರ್ಮದಲ್ಲಿ ಆ ಪದ್ಧತಿ ಇಲ್ಲ. ವಿಭೂತಿ ಧರಿಸದೆ ಹೋದರೆ ಊಟಕ್ಕೆ ಕೊಡುವುದಿಲ್ಲ' ಎಂದು ತನ್ನ ಕಷ್ಟ ಹೇಳಿಕೊಂಡ. ನಿನ್ನ ಧರ್ಮದಲ್ಲಿ ಐದು ಹೊತ್ತು ನಮಾಜು ಮಾಡಬೇಕೆಂಬ ನಿಯಮವಿದೆ, ಅದನ್ನು ನೀನು ಪಾಲಿಸುವುದಾದರೆ ವಿನಾಯಿತಿ ಕೊಡಿಸುವುದಾಗಿ ಆತನಿಗೆ ಹೇಳಿ ಅದರಂತೆ ಆ ಹುಡುಗ ನಮಾಜು ಮಾಡುತ್ತಿದ್ದಾನೋ ಇಲ್ಲವೋ ನಿಗಾ ವಹಿಸಲು ವಾರ್ಡನ್‌ಗೆ ಆದೇಶಿಸಿದೆವು.

ಮಾಸ್ತಿಯವರು ಬರೆದ 'ನಾಲ್ಕು ಸಣ್ಣ ಕತೆಗಳು' ಎಂಬ ಪುಸ್ತಕದಲ್ಲಿ ಎರಡು ಶತಮಾನಗಳ ಹಿಂದೆ ದಿನಾಂಕ 12.12.1800 ರಂದು ಕ್ರೈಸ್ತ ಪಾದ್ರಿಯೋರ್ವನು ಶ್ರೀರಂಗಪಟ್ಟಣದಿಂದ ಫ್ರಾನ್ಸ್‌ನಲ್ಲಿರುವ ತನ್ನ ಸ್ನೇಹಿತರಿಗೆ ಬರೆದ ಒಂದು ಸುದೀರ್ಘ ಪತ್ರದ ಅನುವಾದವನ್ನು ಕೊಟ್ಟಿರುತ್ತಾರೆ. ಅದರಲ್ಲಿ 'ನರಸಿಂಹ' ಎಂಬ ಬ್ರಾಹ್ಮಣ ಹುಡುಗನಿಗೆ 'ಮಹಮ್ಮದ್ ಅಬ್ಬಾಸ್' ಎಂಬ ಹೆಸರನ್ನಿಟ್ಟು ಬಲವಂತವಾಗಿ ಇಸ್ಲಾಂ ಧರ್ಮಕ್ಕೆ ಮತಾಂತರಗೊಳಿಸಿದ ಪ್ರಕರಣದ ಉಲ್ಲೇಖವಿದೆ. ಅದು ಹೇಗೆ ಅವನ ವೈಯಕ್ತಿಕ ಹಾಗೂ ಸಾಮಾಜಿಕ ದುರಂತಗಳಿಗೆ ಕಾರಣವಾಯಿತೆಂಬುದನ್ನು ಆ

ಪತ್ರದಲ್ಲಿ ಮನಗಾಣಬಹುದು. ಇದನ್ನು ಗಮನದಲ್ಲಿರಿಸಿಕೊಂಡು ಆ ಪಾದ್ರಿಯು ಬಲವಂತದಿಂದ ಮತಾಂತರ ಮಾಡುವುದು 'ಅಸಂಸ್ಕೃತ ವರ್ತನೆ' ಎಂದು ಬಣ್ಣಿಸಿದ್ದಾನೆ. ಆದರೂ ಡಿ ನೊಬಿಲಿ ಮಹಾಶಯನಂತೆ ಹಿಂದೂ ಸಮಾಜವನ್ನು ಗೆಲ್ಲಬೇಕಾದರೆ ಅವರಂತೆ ವೇಷಭೂಷಣಗಳನ್ನು ಧರಿಸಿ, ಉಪವಾಸವ್ರತಾಚಾರಣೆ ಮಾಡಿ ಬ್ರಾಹ್ಮಣರನ್ನು ಗೆಲ್ಲಬೇಕೆಂದು ಹೊರಡುವುದು ವ್ಯರ್ಥ ಪ್ರಯತ್ನವೆಂದು ಹೇಳುತ್ತಾನೆ. ಆದಕಾರಣ ಬ್ರಾಹ್ಮಣರನ್ನು ಬಿಟ್ಟು ಇತರೆ ವರ್ಗದ ಜನರನ್ನು ಮತಾಂತರಗೊಳಿಸುವುದು ಸುಲಭ. ಮನೆಯ ಒಬ್ಬ ಯಜಮಾನನನ್ನು ಮತಾಂತರಗೊಳಿಸಿದರೆ ಮನೆಯವರೆಲ್ಲರೂ ಸೇರುತ್ತಾರೆ. ಹಿಂದೂ ಧರ್ಮ ಒಂದು 'ನಾನ್ ರಿಟರ್ನ್ ವಾಲ್ವ್' ಇದ್ದ ಹಾಗೆ ಇತ್ಯಾದಿ ಬರೆದಿರುವುದನ್ನು ನೋಡಿದರೆ ಶತಮಾನಗಳಿಂದ ನಡೆದುಕೊಂಡು ಬಂದಿರುವ ಮತಾಂತರ ಪ್ರಯತ್ನವು ರಣರಂಗದಲ್ಲಿ ಶತ್ರುಸೈನ್ಯದ ದೌರ್ಬಲ್ಯವೇನೆಂಬುದನ್ನು ಗುರುತಿಸಿ ಧಾಳಿ ಮಾಡುವ ಯುದ್ಧದ ತಂತ್ರಗಾರಿಕೆಯಾಗಿ ಕಾಣದಿರದು. ಹಿಂದೂಗಳಲ್ಲಿ ಅನೇಕ ವಿದ್ಯಾವಂತರು ಜಾತಿಯ ಕಟ್ಟುಪಾಡುಗಳನ್ನು ಧಿಕ್ಕರಿಸಿ ಅಂತರಜಾತಿ, ಅಂತರಪಂಗಡ ಮದುವೆಗಳನ್ನು ಮಾಡಿಕೊಂಡಿದ್ದಾರೆ. ಎಷ್ಟೋ ಯುವಕರು ಕ್ರೈಸ್ತರನ್ನೂ ಮದುವೆಯಾಗಿದ್ದಾರೆ. ಅಂತಹ ಮದುವೆಗಳು ಆಯಾಯ ಮನೆತನಗಳ ಮನಸ್ತಾಪಕ್ಕೆ ಕಾರಣವಾಗಿರಬಹುದೇ ಹೊರತು ಮತೀಯ ಸಂಘರ್ಷಕ್ಕೆ ಕಾರಣವಾಗಿಲ್ಲವೆಂಬುದನ್ನು ವಿಚಾರವಂತರು ಮನಗಾಣಬೇಕು. ಮತಾಂತರ ಒಂದು ಬೆಳಕಲ್ಲ; ಬೆಂಕಿಯ ಉಂಡೆ! ಅದಕ್ಕೆ ರಾಜಕೀಯದ ಗಾಳಿ ಬೀಸಿದರೆ ಆಗುವ ಅನಾಹುತ ಅಷ್ಟಿಷ್ಟಲ್ಲ! **'ಒಲೆ ಹತ್ತಿ ಉರಿದೊಡೆ ನಿಲಬಹುದಲ್ಲದೆ, ಧರೆ ಹತ್ತಿ ಉರಿದೊಡೆ ನಿಲಬಹುದೇ?'**

**8.10.2008**

**ಶ್ರೀ ತರಳಬಾಳು ಜಗದ್ಗುರು**
**ಡಾ॥ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು**
**ಸಿರಿಗೆರೆ**

❑